Reg. No. | | | | | | | | | | | |

**BCMKALS 101**

## First Semester B.Com. Degree Examination, December 2024/January 2025
## (SEP) (2024 – 25 Batch Onwards)
## KANNADA LANGUAGE (Paper – I)

S.D.M.C. OF BUSINESS MANAGEMENT LIBRARY

Time : 3 Hours | Max. Marks : 80

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಕರ್ಣನ ವ್ಯಕ್ತಿತ್ವವು ಪಂಪನ ಕಾವ್ಯಭಾಗದಲ್ಲಿ ಹೇಗೆ ಚಿತ್ರಣಗೊಂಡಿದೆ ? ವಿವರಿಸಿರಿ.

**ಅಥವಾ**

ಬಸವಣ್ಣನವರ ಸಾಮಾಜಿಕ ಚಿಂತನೆಗಳು ವಚನಗಳಲ್ಲಿ ಹೇಗೆ ನಿರೂಪಿತವಾಗಿವೆ ? ವಿವರಿಸಿರಿ.

2) ಆಧುನಿಕ ನಾಗರಿಕ ಸಮಾಜ ಮತ್ತು ಬುಡಕಟ್ಟು ಸಮುದಾಯಗಳ ನಡುವಣ ಸಂಘರ್ಷವನ್ನು 'ನಾಗರೀಕತೆ ಬರೆದ ಜರವಾ ಚಿತ್ರ' ಲೇಖನವು ಹೇಗೆ ಚಿತ್ರಿಸಿದೆ ? ವಿವರಿಸಿರಿ.

**ಅಥವಾ**

ಸೂರ್ಯನ ಸಂಕಥನವನ್ನು ಡಾ. ಬಿ. ಎ. ವಿವೇಕ ರೈ ಅವರು ಹೇಗೆ ನಿರೂಪಿಸಿದ್ದಾರೆ ? ವಿವರಿಸಿರಿ.

3) ದ್ರೋಣರು ಏಕಲವ್ಯನಿಂದ ಗುರುಕಾಣಿಕೆಯನ್ನು ಪಡೆಯುವ ಸನ್ನಿವೇಶವು ನಾಟಕದಲ್ಲಿ ಹೇಗೆ ಚಿತ್ರಣಗೊಂಡಿದೆ ? ವಿವರಿಸಿರಿ.

**ಅಥವಾ**

ಮಾನವೀಯ ನೆಲೆಯಲ್ಲಿ ಧರ್ಮವು ಅರಳಬೇಕಾದ ಬಗೆಯನ್ನು 'ಏಕಲವ್ಯ' ನಾಟಕವು ಹೇಗೆ ಚಿತ್ರಿಸುತ್ತದೆ ? ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಸತ್ಯಶರಣೆ ಸಂಕಮ್ಮಳಿಗೆ ನೀಲೇಗೌಡನು ನೀಡಿದ ಕಡುಕಷ್ಟವು ಜನಪದ ಕಾವ್ಯಭಾಗದಲ್ಲಿ ಮೂಡಿಬಂದ ಬಗೆಯನ್ನು ವಿಶ್ಲೇಷಿಸಿರಿ.

**ಅಥವಾ**

ತೆಂಕಣ ಗಾಳಿಯು ಉಂಟುಮಾಡಿದ ಅನಾಹುತಗಳನ್ನು ಕವಿ ಪಂಜೆಯವರು ಹೇಗೆ ಚಿತ್ರಿಸಿದ್ದಾರೆ ? ವಿವರಿಸಿರಿ.

2) ಅಬ್ದುಲ್ ಕಲಾಂ ಅವರು ನಿರೂಪಿಸಿರುವ ಜ್ಞಾನಸಮಾಜದ ಪರಿಕಲ್ಪನೆಯ ಕುರಿತು ವಿವರಿಸಿರಿ.

**ಅಥವಾ**

ಆನ್‌ಲೈನ್ ವ್ಯಾಪಾರದಲ್ಲಿ ಇರಬೇಕಾದ ಎಚ್ಚರಿಕೆಗಳ ಕುರಿತು ಡಾ. ರಾಘವೇಂದ್ರ ರಾವ್ ಅವರ ಅಭಿಪ್ರಾಯಗಳ ಕುರಿತು ವಿವರಿಸಿರಿ.

3) ಕುರುಕ್ಷೇತ್ರ ಯುದ್ಧದಲ್ಲಿ ಏಕಲವ್ಯನನ್ನು ತಮ್ಮ ಪಕ್ಷಕ್ಕೆ ಬರಮಾಡಿಕೊಳ್ಳಬಯಸುವ ಕೌರವರ ಮತ್ತು ಪಾಂಡವರ ತಂತ್ರಗಾರಿಕೆಯು ಹೇಗೆ ವಿಫಲಗೊಳ್ಳುತ್ತದೆ ? ವಿವರಿಸಿರಿ.

**ಅಥವಾ**

'ಕುರುಕ್ಷೇತ್ರ' ನಾಟಕದಲ್ಲಿ ಚಿತ್ರಣಗೊಂಡ ದ್ರೋಣ–ಭೀಷ್ಮರ ನಡುವೆ ನಡೆದ ಸಂಭಾಷಣೆಯ ತಾತ್ತ್ವಿಕತೆಯನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

1) ಪಿಡಿಯೆಂ ಪುರಿಗಣೆಯಂ ನರ
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ
ದೊರ್ಡಮಟಿಯೆಂ ಪೆರ್ಜಸಮನೆ
ಪಿಡಿದೆನ್ನನೆ ರಣದೊಳಟಿವೆನಿರದಡಿಯೆತ್ತಿಂ

S.D.M.C. OF BUSINESS MANAGEMENT LIBRARY

2) ಜಡನಿದ್ರೆ ಸಿಡಿದೆದ್ದ ವೀರಾಟ್ಟಹಾಸದಲಿ
ಬಾನು ಬುವಿ ಬೆಳಗಬೇಕು;
ನಡೆ ನುಡಿಗಳೆಡೆಯಲ್ಲಿ, ಪದತಾಳ ಗತಿಯಲ್ಲಿ
ಕ್ರಾಂತಿ ಕಿಡಿ ಕೆರಳಬೇಕು;

IV. ಅ) ಕೆಳಗಿನ **ಎರಡರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(2×4=8)**

1) ನೀನಿರೆ ಮತ್ತೆ ಪೆರರ್ ನರೇಂದ್ರರೇ

2) ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ

3) ಉಪ್ಪು ತಿಂದ ಮನೆಯ ಕಾಯುದು ಕರ್ತವ್ಯ

4) ಬೇರೆ ಏನೇನೋ ದಾರಿ ಹುಡುಕಿ
ಸಂದೇಶ ಮುಟ್ಟಿಸಲು ಹೆಣಗುತ್ತೇವೆ

ಆ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. (2×4=8)

1) ಡಾ. ಬಿ. ಎ. ವಿವೇಕ ರೈ

2) ರಹಮತ್ ತರೀಕೆರೆ

3) ಗ್ರಾಮೀಣ ಜಾಲ

4) ಸ್ಮಾರ್ಟ್‌ಯುಗ ಮತ್ತು ಗ್ರಾಹಕರಾಗಿ ಇಂದಿನ ಮಕ್ಕಳು.

ಇ) ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. (2×4=8)

1) ಡಾ. ಸಿದ್ಧಲಿಂಗಯ್ಯ

2) ಶಬ್ದವೇಧಿ

3) ಭೀಷ್ಮರ ಪಾತ್ರಚಿತ್ರಣ

4) ಗಾಳಣ್ಣನ ಪಾತ್ರಚಿತ್ರಣ.

S.D.M.C. OF BUSINESS MANAGEMENT LIBRARY

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (12×1=12)

1) ಪಂಪನ ಕುರಿತಾದ ಮಾಹಿತಿಗಳು ಯಾವ ಶಾಸನದಲ್ಲಿ ದೊರೆಯುತ್ತವೆ ?

2) ಬಸವಣ್ಣನವರ ತಂದೆಯ ಹೆಸರೇನು ?

3) ಪಂಜೆ ಮಂಗೇಶರಾಯರ ಯಾವ ಸಣ್ಣಕತೆಯು ಮೊದಲ ಆಧುನಿಕ ಕತೆ ಎಂದು ಮಾನ್ಯವಾಗಿದೆ ?

4) ಡಾ. ಪಿ. ಕೆ. ರಾಜಶೇಖರ ಅವರು ಕಟ್ಟಿ ಬೆಳೆಸಿದ ಜನಪದ ಗಾಯನ ತಂಡದ ಹೆಸರೇನು ?

5) ರಹಮತ್ ತರೀಕೆರೆ ಅವರ ಹುಟ್ಟೂರು ಯಾವುದು ?

6) ಜರ್ಮನಿಯ ಪ್ರಸಿದ್ಧ ಭಾಷಾತಜ್ಞ ಮತ್ತು ಇಂಡಾಲಜಿ ಪ್ರವರ್ತಕನ ಹೆಸರೇನು ?

7) ಅಬ್ದುಲ್ ಕಲಾಂ ಅವರ ಆತ್ಮಕತೆಯ ಹೆಸರೇನು ?

8) ಡಾ. ರಾಘವೇಂದ್ರ ರಾವ್ ಅವರು ಬರೆದ ಮೊದಲ ಕೃತಿಯ ಹೆಸರೇನು ?

9) 'ಕಪ್ಪು ಕಾಡಿನ ಹಾಡು' ಕೃತಿಯ ಕರ್ತೃ ಯಾರು ?

10) ಏಕಲವ್ಯನ ತಂದೆಯ ಹೆಸರೇನು ?

11) ಪಾಂಡವರು ಅಜ್ಞಾತವಾಸದ ಕಾಲದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಎಲ್ಲಿ ಬಚ್ಚಿಟ್ಟರು ?

12) ಗಾಂಡೀವಿ ಎಂದರೆ ಯಾರು ?

---